# ಕೌಟುಂಬಿಕ ಮತ್ತು ಸಾಮಾಜಿಕ ಧಾರ್ಮಿಕ ಕೃತಿಗಳ ಹಿಂದಿನ ಶಾಸ್ತ್ರ

## ಮನೋಗತ

‘ಸುಖಂ ನ ವಿನಾ ಧರ್ಮಾತ್ । ತಸ್ಮಾತ್ ಧರ್ಮಪರೋ ಭವೇತ್ ॥’ ಅಂದರೆ ನಿಜವಾದ ಸುಖವು (ಆನಂದ) ಧರ್ಮಾಚರಣೆಯನ್ನು ಮಾಡದೇ ಸಿಗುವುದಿಲ್ಲ; ಆದುದರಿಂದ ಯಾವಾಗಲೂ ಧರ್ಮಾಚರಣೆಯನ್ನು ಮಾಡಬೇಕು ಎಂದು ಸಂಸ್ಕೃತದಲ್ಲಿ ಸುವಚನವಿದೆ. ಜೀವನದ ನೌಕೆಯನ್ನು ನಡೆಸುತ್ತಿರುವಾಗಲೂ ಸತತವಾಗಿ ಧರ್ಮಪರಾಯಣರಾಗಲು, ಅಂದರೆ ಧರ್ಮಾಚರಣೆಯನ್ನು ಮಾಡಲು ಹಿಂದೂಧರ್ಮವು ನಮಗೆ ವಿವಿಧ ಧಾರ್ಮಿಕ ಕೃತಿಗಳು, ಸಂಸ್ಕಾರಗಳು, ಹಬ್ಬಗಳು, ವ್ರತಗಳು ಮುಂತಾದ ಸುಲಭ ಅವಕಾಶಗಳನ್ನು ಒದಗಿಸಿಕೊಟ್ಟಿದೆ. ನಿತ್ಯಪೂಜೆ, ಹಾಗೆಯೇ ಹಬ್ಬ, ವ್ರತಗಳು ಇಂತಹ ಉಪಾಸನೆಗಳಿಗೆ ಸಂಬಂಧಿಸಿದ ಕೃತಿಗಳ ಮೂಲಕವಷ್ಟೇ ಅಲ್ಲದೇ ಕೌಟುಂಬಿಕ ಮತ್ತು ಸಾಮಾಜಿಕ ಸ್ತರದಲ್ಲಿನ ಧಾರ್ಮಿಕ ಕೃತಿಗಳಿಂದಲೂ ಹಿಂದೂಧರ್ಮವು ಧರ್ಮಾಚರಣೆಯ ಸಂದೇಶವನ್ನು ಕೊಟ್ಟಿದೆ.

ಹಿಂದೂ ಧರ್ಮದಲ್ಲಿ ಹೇಳಿದಂತೆ ಅಂದರೆ, ಅಧ್ಯಾತ್ಮಶಾಸ್ತ್ರದ ಆಧಾರವಿರುವ ವಿಧಿಗಳನ್ನು ಪಾಲಿಸಿ ಯಾವುದೇ ಕೃತಿಯನ್ನು ಮಾಡಿದರೂ, ನಮಗೆ ಆ ಕೃತಿಗಳಿಂದ ದೇವತೆಗಳ ಆಶೀರ್ವಾದವು ದೊರಕುತ್ತದೆ ಮತ್ತು ಅವರ ಕೃಪೆಯಿಂದ ಕೆಟ್ಟ ಶಕ್ತಿಗಳಿಂದ ತೊಂದರೆಯಾಗದಂತೆ ರಕ್ಷಣೆಯಾಗುತ್ತದೆ. ಇಂತಹ ಕೃತಿಗಳು ವ್ಯಷ್ಟಿಯೊಂದಿಗೆ ಸಮಷ್ಟಿಗೂ ಆಧ್ಯಾತ್ಮಿಕ ಲಾಭವನ್ನು ಪ್ರಾಪ್ತಮಾಡಿಕೊಡುವುದರಿಂದ ಇದು ಒಂದು ರೀತಿಯಲ್ಲಿ ಸಮಷ್ಟಿ ಸಾಧನೆಯೇ ಆಗಿದೆ. ಈ ಗ್ರಂಥದಲ್ಲಿ ಹುಟ್ಟುಹಬ್ಬ, ಆರತಿ, ಉಡುಗೊರೆ ಕೊಡುವುದು, ವಯಸ್ಸಿಗನುಸಾರ ಶಾಂತಿ ಮಾಡುವುದು ಇಂತಹ ಕೌಟುಂಬಿಕ ಕೃತಿಗಳನ್ನು ಮತ್ತು ಉದ್ಘಾಟನೆ, ದೀಪಪ್ರಜ್ವಲನ, ಸತ್ಕಾರ ಮಾಡುವುದು ಮತ್ತು ಶೋಕಪ್ರದರ್ಶನ ಇಂತಹ ಸಾಮಾಜಿಕ ಕೃತಿಗಳನ್ನು ಮಾಡುವುದರ ಹಿಂದಿನ ಉದ್ದೇಶ, ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಅವುಗಳ ಯೋಗ್ಯ ಪದ್ಧತಿ ಮತ್ತು ಅವುಗಳ ಹಿಂದಿನ ಶಾಸ್ತ್ರವನ್ನು ಹೇಳಿಕೊಡಲಾಗಿದೆ. ಶಾಸ್ತ್ರವನ್ನು ತಿಳಿದುಕೊಂಡು ಆಯಾ ಕೃತಿಗಳನ್ನು ಶ್ರದ್ಧಾಪೂರ್ವಕವಾಗಿ ಮಾಡಿದರೆ ಆಯಾ ಕೃತಿಗಳಿಂದಾಗುವ ಫಲಪ್ರಾಪ್ತಿಯು ಹೆಚ್ಚಿರುತ್ತದೆ. ಸಂಸ್ಕೃತ ಶ್ಲೋಕಗಳನ್ನು ಪಠಿಸುವುದರ ಮಹತ್ವ ಮತ್ತು ಅಧ್ಯಾತ್ಮದ ಬಗೆಗಿನ ಪ್ರವಚನ, ಗ್ರಂಥ ಪ್ರದರ್ಶನ ಹಾಗೂ ಜನಜಾಗೃತಿ ಅಭಿಯಾನ, ಶೋಕಸಭೆ ಮುಂತಾದ ಪ್ರಸಂಗಗಳಲ್ಲಿ ಯಾವ ಶ್ಲೋಕಗಳನ್ನು ಹೇಳಬೇಕು ಎಂಬುದರ ಬಗೆಗಿನ ಮಾಹಿತಿಯನ್ನೂ ಈ ಗ್ರಂಥದಲ್ಲಿ ಕೊಡಲಾಗಿದೆ.

ಪ್ರಸ್ತುತ ಹಿಂದೂಗಳು ಪಾಶ್ಚಾತ್ಯರ ಅಂಧಾನುಕರಣೆಯನ್ನು ಮಾಡುತ್ತಿದ್ದಾರೆ. ನಮ್ಮ ಧರ್ಮ ಮತ್ತು ನಮ್ಮ ಸಂಸ್ಕೃತಿಯನ್ನು ಮರೆತಿರುವುದು ಮತ್ತು ಪಾಶ್ಚಾತ್ಯ

ಸಂಸ್ಕೃತಿಯಲ್ಲಿ ಮೈಮರೆತಿರುವುದು ಇವುಗಳ ಪರಿಣಾಮದಿಂದಾಗಿ ಪಾಶ್ಚಾತ್ಯ ಸಂಸ್ಕೃತಿಯು ನಮ್ಮ ಧಾರ್ಮಿಕ ಕೃತಿಗಳ ಮೇಲೆ ಬಹುದೊಡ್ಡ ದುಷ್ಪರಿಣಾಮವನ್ನು ಬೀರಿದೆ. ಹುಟ್ಟುಹಬ್ಬವನ್ನು ಆರತಿಯನ್ನು ಮಾಡಿ ಆಚರಿಸದೇ, ಕೇಕ್‌ನ್ನು ಕತ್ತರಿಸಿ ಮೇಣದ ಬತ್ತಿಗಳನ್ನು ಆರಿಸುವುದರ ಮೂಲಕ ಆಚರಿಸುವುದು, ತೆಂಗಿನಕಾಯಿಯನ್ನು ಒಡೆದು ಉದ್ಘಾಟನೆಯನ್ನು ಮಾಡದೇ, ರಿಬ್ಬನ್ ಕತ್ತರಿಸಿ ಉದ್ಘಾಟನೆ ಮಾಡುವುದು, ಎಣ್ಣೆಯ ದೀಪದಿಂದ ದೀಪಪ್ರಜ್ವಲನವನ್ನು ಮಾಡದೇ ಮೇಣದ ಬತ್ತಿಯಿಂದ ದೀಪಪ್ರಜ್ವಲನ ಮಾಡುವುದು ಇಂತಹ ಅನೇಕ ಉದಾಹರಣೆಗಳಿಂದ ಇದು ನಮ್ಮ ಗಮನಕ್ಕೆ ಬರುತ್ತದೆ. ಇಂತಹ ಕೃತಿಗಳಿಂದ ನಮಗೆ ಈಶ್ವರನ ಚೈತನ್ಯವು ಸಿಗುವುದಿಲ್ಲ, ಅಲ್ಲದೇ ಇಂತಹ ಕೃತಿಗಳು ಅಧ್ಯಾತ್ಮಶಾಸ್ತ್ರದ ದೃಷ್ಟಿಯಲ್ಲಿ ಹೇಗೆ ಹಾನಿಕಾರಕವಾಗಿವೆ ಎಂಬುದನ್ನು ಈ ಗ್ರಂಥದಲ್ಲಿ ಶಾಸ್ತ್ರಸಹಿತ ಹೇಳಲಾಗಿದೆ.

ಈ ಗ್ರಂಥದಲ್ಲಿ ನೀಡಿದ ಶಾಸ್ತ್ರಗಳಿಗನುಸಾರ ಕೃತಿಗಳನ್ನು ಮಾಡಿ ವ್ಯಷ್ಟಿ ಮತ್ತು ಸಮಷ್ಟಿಯ ಉನ್ನತಿಯಾಗಲಿ, ಹಾಗೆಯೇ ಹಿಂದೂಗಳಲ್ಲಿ ತಮ್ಮ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನ ಜಾಗೃತವಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – ಸಂಕಲನಕಾರರು

**ಟಿಪ್ಪಣಿ :** ಆಧ್ಯಾತ್ಮಿಕ ಮಟ್ಟ : ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸತ್ತ್ವ, ರಜ ಮತ್ತು ತಮ ಎಂಬ ತ್ರಿಗುಣಗಳಿರುತ್ತವೆ. ಸಾಧನೆಯನ್ನು ಮಾಡಲಾರಂಭಿಸಿದ ನಂತರ ವ್ಯಕ್ತಿಯಲ್ಲಿರುವ ರಜ– ತಮ ಗುಣಗಳ ಪ್ರಮಾಣವು ಕಡಿಮೆಯಾಗಿ ಸತ್ತ್ವಗುಣವು ವೃದ್ಧಿಸತೊಡಗುತ್ತದೆ. ಸತ್ತ್ವ ಗುಣದ ಪ್ರಮಾಣ ಎಷ್ಟು ಹೆಚ್ಚಿರುತ್ತದೆಯೋ, ಅಷ್ಟೇ ಆಧ್ಯಾತ್ಮಿಕ ಮಟ್ಟವೂ ಹೆಚ್ಚಿರುತ್ತದೆ. ಸಾಮಾನ್ಯ ವ್ಯಕ್ತಿಯ ಆಧ್ಯಾತ್ಮಿಕ ಮಟ್ಟ ಶೇ. ೨೦ ರಷ್ಟಿದ್ದರೆ ಮೋಕ್ಷ ಹೊಂದಿದ ವ್ಯಕ್ತಿಯ ಆಧ್ಯಾತ್ಮಿಕ ಮಟ್ಟ ಶೇ. ೧೦೦ ರಷ್ಟಿರುತ್ತದೆ ಮತ್ತು ಆಗ ಅವನು ತ್ರಿಗುಣಾತೀತನಾಗುತ್ತಾನೆ.


ಸನಾತನದ ಆಚಾರಧರ್ಮ ಮಾಲಿಕೆಯ ಗ್ರಂಥ : **ಸಾತ್ತ್ವಿಕ ಆಹಾರದ ಮಹತ್ವ**

ಯಾವುದು ಶರೀರದೊಂದಿಗೆ ಮನಸ್ಸಿನ ಆರೋಗ್ಯವನ್ನೂ ಕಾಪಾಡುತ್ತದೆಯೋ, ಅದೇ ನಿಜವಾದ ಆಹಾರ ! ಮೊಟ್ಟೆ, ಮಾಂಸ, ಮದ್ಯಗಳಿಂದ ಮನುಷ್ಯನ ವೃತ್ತಿ ತಾಮಸಿಕವಾಗಿ ಕೆಟ್ಟ ಶಕ್ತಿಗಳ ತೊಂದರೆಯಾಗಬಹುದು. ಹಾಲು, ಅಕ್ಕಿ, ಬೇಳೆ ಮುಂತಾದ ಆಹಾರದಿಂದ ಶರೀರದೊಂದಿಗೆ ಮನಸ್ಸು ಮತ್ತು ಬುದ್ಧಿಯ ಪೋಷಣೆ ಹೇಗೆ ಆಗುತ್ತದೆ ಎಂಬುದನ್ನು ಸ್ಪಷ್ಟಪಡಿಸುವ ಗ್ರಂಥ !

# ಅಧ್ಯಾಯ ೧ : ಕೌಟುಂಬಿಕ ಧಾರ್ಮಿಕ ಕೃತಿಗಳ ಹಿಂದಿನ ಶಾಸ್ತ್ರ

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಹುಟ್ಟುಹಬ್ಬ** ೧೩

* ಆಧ್ಯಾತ್ಮಿಕ ಅರ್ಥ, ಇತಿಹಾಸ ಮತ್ತು ಮಹತ್ವ ೧೩
* ಹುಟ್ಟುಹಬ್ಬವನ್ನು ತಿಥಿಗನುಸಾರವಾಗಿ ಆಚರಿಸುವ ಮಹತ್ವ ೧೫
* ಹುಟ್ಟುಹಬ್ಬವನ್ನು ಆಚರಿಸುವ ಪದ್ಧತಿ ೧೯
* ಹುಟ್ಟುಹಬ್ಬದಂದು ಮಾಡಬಾರದ ಕೃತಿಗಳು ಮತ್ತು ಅವುಗಳ ಹಿಂದಿನ ಶಾಸ್ತ್ರ ೨೫
* ಸಂತರ ಜನ್ಮದಿನ ೩೨
* ಚಿಕ್ಕಮಕ್ಕಳ, ಯುವಕರ, ವೃದ್ಧರ ಮತ್ತು ಸಂತರ ಹುಟ್ಟುಹಬ್ಬ ಆಚರಿಸುವುದು ೩೨

**೨. ಆರತಿ ಬೆಳಗುವುದು** ೩೪

* 'ಆರತಿ ಬೆಳಗುವುದು' ಇದರ ಆಧ್ಯಾತ್ಮಿಕ ಅರ್ಥ ಮತ್ತು ಮಹತ್ವ ೩೪
* ಆರತಿಯನ್ನು ಯಾರಿಗೆ ಮತ್ತು ಎಲ್ಲಿ ಬೆಳಗಬೇಕು ? ೩೪
* ಆರತಿಯಲ್ಲಿನ ಕೃತಿಗಳ ಹಿಂದಿನ ಶಾಸ್ತ್ರ ೩೯
* ವಿವಿಧ ರೀತಿಯ ಆರತಿ ಬೆಳಗುವ ಉದ್ದೇಶ ಮತ್ತು ಅದರಿಂದ ಜೀವದ ಮೇಲಾಗುವ ಪರಿಣಾಮ ೪೮

**೩. ಉಡುಗೊರೆ ಕೊಡುವುದು** ೫೧

* ಉಡುಗೊರೆಗಳು ಹೇಗಿರಬೇಕು ಮತ್ತು ಅವುಗಳನ್ನು ಕೊಡುವಾಗ ನಮ್ಮ ಭಾವವು ಹೇಗಿರಬೇಕು ? ೫೧
* ಉಡುಗೊರೆ ಎಂದು ಕೊಡುವ ವಸ್ತುಗಳಿಗೆ ಅರಿಶಿನ-ಕುಂಕುಮವನ್ನು ಏಕೆ ಹಚ್ಚುತ್ತಾರೆ ? ೫೨

**೪. ಶಾಂತಿವಿಧಿಗಳನ್ನು ಮಾಡುವುದು** ೫೩

* ಉದ್ದೇಶ ಮತ್ತು ಶಾಂತಿವಿಧಿ ಮಾಡುವ ದಿನ ೫೩

**೫. ಸತ್ಯನಾರಾಯಣ ಪೂಜೆ** ೬೨

# ಅಧ್ಯಾಯ ೨ : ಸಾಮಾಜಿಕ ಧಾರ್ಮಿಕ ಕೃತಿಗಳ ಹಿಂದಿನ ಶಾಸ್ತ್ರ

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. **ಉದ್ಘಾಟನೆ** ೬೬

* ಪಾಶ್ಚಾತ್ಯ ಸಂಸ್ಕೃತಿಯಂತೆ ರಿಬ್ಬನ್‌ನ್ನು ಕತ್ತರಿಸಿ ಏಕೆ ಉದ್ಘಾಟನೆ ಮಾಡಬಾರದು ? ೬೮

೨. **ದೀಪಪ್ರಜ್ವಲನ** ೭೧

* ವ್ಯಾಸಪೀಠದ ಮೇಲಿನ ಕಾರ್ಯಕ್ರಮದ ಉದ್ಘಾಟನೆಯ ಸಂದರ್ಭದಲ್ಲಿ ತೆಂಗಿನಕಾಯಿಯನ್ನು ಒಡೆಯುವುದು ಮತ್ತು ದೀಪಪ್ರಜ್ವಲನ ಮಾಡುವುದರ ಹಿಂದಿನ ಶಾಸ್ತ್ರ ೭೨
* ವ್ಯಾಸಪೀಠದ ಮೇಲೆ ದೀಪಪ್ರಜ್ವಲನವನ್ನು ಮಾಡುವ ಕೃತಿಗಳ ಶಾಸ್ತ್ರ ೭೫
* ವ್ಯಾಸಪೀಠದ ಮೇಲಿನ ದೀಪಪ್ರಜ್ವಲನವನ್ನು ಸಂತರ ಅಥವಾ ಸಾತ್ತ್ವಿಕ ವ್ಯಕ್ತಿಗಳಿಂದ ಮಾಡಿಸುವುದು ಏಕೆ ಯೋಗ್ಯವಾಗಿದೆ ? ೮೦

೩. **ಸತ್ಕಾರ ಮಾಡುವುದು** ೮೧

* ಯಾರಿಗೆ ಸತ್ಕಾರ ಮಾಡಬೇಕು ? ಯಾರು ಮಾಡಬೇಕು ? ೮೧
* ಸತ್ಕಾರಕ್ಕೆ ಪಾತ್ರವಾಗಿರುವ ವ್ಯಕ್ತಿಗಳಿಗೆ ಸತ್ಕಾರ ಮಾಡುವುದು ೮೨
* ಸ್ತ್ರೀ ಅಥವಾ ಪುರುಷ ಸಂತರ ಸನ್ಮಾನ (ಸತ್ಕಾರ) ಮಾಡುವುದು ೮೭
* ಸತ್ಕಾರ ಮಾಡುವಾಗ ಯಾವ ಕೃತಿಗಳನ್ನು ಮಾಡಬಾರದು ? ೮೮

೪. **ಗ್ರಂಥ ಪ್ರಕಾಶನ** ೮೯

* ಗ್ರಂಥ ಪ್ರಕಾಶನದ ಸಮಯದಲ್ಲಿ ಮಾಡಬೇಕಾದ ಕೃತಿಗಳು ೯೦
* ಗ್ರಂಥಗಳಿಗೆ ರಿಬ್ಬನ್‌ನ್ನು ಕಟ್ಟಿ ನಂತರ ಅದನ್ನು ಬಿಡಿಸಿ ಗ್ರಂಥ ಪ್ರಕಾಶನವನ್ನು ಏಕೆ ಮಾಡಬಾರದು ? ೯೧

೫. **ವಿವಿಧ ಕಾರ್ಯಕ್ರಮಗಳ ಸಮಯದಲ್ಲಿ ಸಂಸ್ಕೃತದ ಯಾವ ಶ್ಲೋಕಗಳನ್ನು ಹೇಳಬೇಕು ಮತ್ತು ಏಕೆ ಹೇಳಬೇಕು** ? ೯೨

೬. **ಒಂದು ಅಥವಾ ಎರಡು ಭಾಗಗಳಿರುವ ವ್ಯಾಸಪೀಠದ ಮೇಲಿನ ಕಾರ್ಯಕ್ರಮದ ಸ್ವರೂಪವು ಹೇಗಿರಬೇಕು** ? ೯೫

೭. **ಶೋಕಸಭೆ** ೯೭